# 2 ನೇ ಹೆಚ್ಚುವರಿ ಪ್ರಥಮ ದರ್ಜೆಯ  ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ನಂಜನಗೂಡು.

**ಓ ಎಸ್ ನಂ.97-2012** **ಡಿ . ಡಬ್ಲುಃ 1**

| | |
|---|---|
| ಸಾಕ್ಷಿದಾರರ ಹೆಸರು<br>ವಾಸ್ತವ್ಯ | ಶಿವಪ್ಪ<br>ಹೆಡಿಯಾಲ ಗ್ರಾಮ, ನಂಜನಗೂಡು ತಾ. |
| | **ಸತ್ಯ ಪ್ರತಿಜ್ಞೆಯ ಮೇರೆಗೆ  ದಿನಾಂಕ** 20-09-2024. |

**<u>ಪಾಟೀ ಸವಾಲುಃ  ಶ್ರೀ ಬಿ.ಕೆ.ಆರ್   ವಕೀಲರಿಂದಃ</u>**

ನನಗೆ ಈಗ 55 ವರ್ಷ ವಯಸ್ಸಾಗಿರುತ್ತದೆ. ನಾನು, ನನ್ನ ತಂದೆ ಮತ್ತು ತಾತ ಹೆಡಿಯಾಲ ಗ್ರಾಮದ ವಾಸಗಳಾಗಿರುತ್ತೇವೆ. ವಾದಿ ನನಗೆ ಗೊತ್ತು. ವಾದಿ ಮತ್ತು ಅವರ ಪೂರ್ವಜರೆಲ್ಲಾ ಹೆಡಿಯಾಲ ಗ್ರಾಮದವರೇ ಎಂದರೆ ನನಗೆ ಗೊತ್ತಿಲ್ಲ. ವಾದಿ ಮತ್ತು ಅವರ ಪೂರ್ವಜರೆಲ್ಲಾ ಹೆಡಿಯಾಲ ಗ್ರಾಮದವರು ಎಂದು ನನಗೆ ಗೊತ್ತಿದ್ದರೂ ಸಹ  ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ವಾದಿಯವರ ಅಜ್ಜಿಯಿ ಹೆಸರು ದೇವಿರಮ್ಮ ಎಂದರೆ ನನಗೆ ಗೊತ್ತಿಲ್ಲ. ದೇವಿರಮ್ಮನವರು ದಾವಾ ಷೆಡ್ಯೂಲ್ ಸ್ವತ್ತನ್ನು ದಿ.13-12-1954 ರಲ್ಲಿ ಲಿಂಗಪ್ಪನವರಿಂದ ಖರೀದಿ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪುಟ್ಟಬಸಪ್ಪ ನನಗೆ ಗೊತ್ತಿಲ್ಲ. ಪುಟ್ಟಬಸಪ್ಪ ನವರು ಲಿಂಗಪ್ಪನವರ ಮಗ ಎಂದರೆ ನನಗೆ ಗೊತ್ತಿಲ್ಲ. ನನಗೆ ಪುಟ್ಟಬಸಪ್ಪ ಮತ್ತು ಲಿಂಗಪ್ಪನವರು ಗೊತ್ತಿದ್ದರೂ ಸಹ  ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

2. ದೇವಿರಮ್ಮನವರು ಖರೀದಿ ಮಾಡಿದ ಸ್ವತ್ತಿನ ಪೈಕಿ 0.4 ಗುಂಟೆ ಸ್ವತ್ತು ರಸ್ತಗಾಗಿ ಭೂ-ಸ್ವಾಧೀನವಾಗಿದ್ದು 0.4 ಗುಂಟೆ ಸ್ವತ್ತನ್ನು 2 ನೇ ಪ್ರತಿವಾದಿಯವರಿಗೆ ಮಾರಾಟ ಮಾಡಿದ್ದು, ಉಳಿದ 0.4 ಗುಂಟೆ ಸ್ವತ್ತಿನಲ್ಲಿ ವಾದಿಗಳೇ ಸಾಧೀನದಲ್ಲಿ ಇರುತ್ತಾರೆ ಎಂದರೆ ಸರಿಯಲ್ಲ.  ಸಾಕ್ಷಿ ಮುಂದುವರೆದು ದೇವಿರಮ್ಮನವರು ಖರೀದಿ

ಮಾಡಿದ ಸ್ವತ್ತಿನ ಪೈಕಿ 0.9 ಗುಂಟೆ ಸ್ವತ್ತು ಸರ್ಕಾರಕ್ಕೆ ಭೂಸ್ವಾಧೀನವಾಗಿದ್ದು, ಉಳಿದ 0.3 ಗುಂಟೆ ಸ್ವತ್ತನ್ನು ಹುಚ್ಚೇಗೌಡ ಎಂಬ ಹೆಸರಿನ ಬೇರೆ ವ್ಯಕ್ತಿಗೆ ಮಾಡಿರುತ್ತಾರೆ ಎಂದು ನುಡಿಯುತ್ತಾರೆ. ನಾನು ಹೇಳುವಂತೆ ದೇವಿರಮ್ಮ ನವರು ಖರೀದಿ ಮಾಡಿ ಸ್ವತ್ತಿನ ಪೈಕಿ 0.9 ಗುಂಟೆ ಸ್ವತ್ತು ಸರ್ಕಾರಕ್ಕೆ ಭೂಸ್ವಾಧೀನವಾಗದೇ ಇದ್ದರೂ, ಹಾಗೂ ಉಳಿದ 0.3 ಗುಂಟೆ ಸ್ವತ್ತನ್ನು ಹುಚ್ಚೇಗೌಡ ಎಂಬ ಹೆಸರಿನ ಬೇರೆ ವ್ಯಕ್ತಿಗೆ ರವರಿಗೆ ಮಾರಾಟ ಮಾಡದೇ ಇದ್ದರೂ ಸಹ ನಾನು ಸುಳ್ಳು ಕತೆಕಟ್ಟಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ದೇವಿರಮ್ಮ ನವರು 0.3 ಗುಂಟೆ ಸ್ವತ್ತನ್ನು ಹುಚ್ಚೇಗೌಡ ಎಂಬ ಹೆಸರಿನ ಬೇರೆ ವ್ಯಕ್ತಿಗೆ ಮಾರಾಟ ಮಾಡಿದ್ದಾರೆ ಎಂಬುದಕ್ಕೆ ಸಂಬಂಧಿಸಿದಂತೆ ನಾನು ದಾಖಲೆಯನ್ನು ನೋಡಿರುವುದಿಲ್ಲ, ಆ ರೀತಿ ನನ್ನ ತಂದ ಹೇಳುತ್ತಿದ್ದರು. ದೇವಿಮ್ಮನವರು ಉಳಿಸಿಕೊಂಡ 0.4 ಗುಂಟೆ ಸ್ವತ್ತಿನಲ್ಲಿ ವಾದಿಯವರೇ ಸ್ವಾಧೀನದಲ್ಲಿ ಇದ್ದು ಅವರೇ ಮಾಲೀಕರಾಗಿರುತ್ತಾರೆ ಎಂದರೆ ಸರಿಯಲ್ಲ.

3. ನಾನು ದಾವಾ ಷೆಡ್ಯೂಲ್ ಸ್ವತ್ತಿನ ಚೆಕ್ಕುಬಂದಿಯನ್ನು ಹೇಳಬಲ್ಲೆ ಪೂರ್ವಕ್ಕೇ-ನನಗೆ ಸೇರಿದ ಮನೆ, ಪಶ್ಚಿಮಕ್ಕೇ-ನನಗೆ ಸೇರಿದ ನಿವೇಶನ, ಉತ್ತರಕ್ಕೇ-ಪಾರ್ವತಮ್ಮ ನವರ ನಿವೇಶನ ಮತ್ತು ದಕ್ಷಿಣಕ್ಕೇ-ರಸ್ತೆ ಇರುತ್ತದೆ. ದಾವಾ ಷೆಡ್ಯೂಲ್ ಸ್ವತ್ತಿನ ಪೂರ್ವಕ್ಕೆ ನನಗೆ ಸೇರಿದ ಸ್ವತ್ತು ಇದ್ದು, ಪಶ್ಚಿಮಕ್ಕೆ ಜಬ್ಬಾರ್ ಸಾಹೇಬ್ ರವರಿಗೆ ಸೇರಿದ ಸ್ವತ್ತು ಇರುತ್ತದೆ ಎಂದರೆ ಸರಿಯಲ್ಲ. ಉತ್ತರಕ್ಕೇ-ಇಬ್ರಾಹಿಂ ಸಾಹೇಬ್ ರವರ ಸ್ವತ್ತು ಇದ್ದು, ದಕ್ಷಿಣಕ್ಕೇ-ವಾದಿಯವರ ಆಸ್ತಿ ನಂತರ ರಸ್ತೆ ಇರುತ್ತದೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

**(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತ ಮಾಡಿಸಲಾಯಿತು)**

**ಓ . ಹೇ. ಕೇ. ಸರಿ. ಇದೆ**

**ಸಹಿ/-**

**ಕಿ.ಪ್ರ.ದ. ನ್ಯಾ ದಂ. ನಂಜನಗೂಡು**